# ರಿಂಕು ಜೀಕು

**ಇದೀಗ ಚಾಲ್ತಿಯಲ್ಲಿರುವ 'ಐಪಿಎಲ್' ಸೃಷ್ಟಿಸಿರುವ ಹೊಸ ತಾರೆ ರಿಂಕು ಸಿಂಗ್‌. ಸತತ ಐದು ಸಿಕ್ಸರ್‌ಗಳನ್ನು ಸಿಡಿಸುವುದರ ಜೊತೆಗೆ, ಕೌಟುಂಬಿಕ ಹಿನ್ನೆಲೆಯ ಕಾರಣದಿಂದಲೂ ರಿಂಕು ಕ್ರೀಡಾಪ್ರಿಯರ ಗಮನಸೆಳೆದಿದ್ದಾರೆ.**

**ರೂಪಾ ಡಿ.ಎ.**



ರಿಂಕು ಸಿಂಗ್ ಆಟದ ವೈಖರಿ

2018ರಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು 'ಇಂಡಿಯನ್ ಪ್ರೀಮಿಯರ್ ಲೀಗ್' (ಐಪಿಎಲ್) ಕ್ರಿಕೆಟ್ ಆಡುವ ತಂಡಕ್ಕೆ ರಿಂಕು ಸಿಂಗ್ ಅವರನ್ನು ಹರಾಜಿಗೆ ಕೂಗಿದ್ದು 80 ಲಕ್ಷ ರೂಪಾಯಿಗೆ. ಸಾಮಾನ್ಯವಾಗಿ ಐಪಿಎಲ್ ತಂಡಕ್ಕೆ ಆಯ್ಕೆಯಾದ ಹುಡುಗರ ಪ್ರತಿಕ್ರಿಯೆ ದೇಶಕ್ಕಾಗಿ ಕ್ರಿಕೆಟ್ ಆಡುವ ಕನಸನ್ನು ಒಳಗೊಂಡಿದ್ದಾಗಿರುತ್ತದೆ. ಆದರೆ, ರಿಂಕು ಹಾಗೆ ಹೇಳಲಿಲ್ಲ. 'ಅಣ್ಣನ ಮದುವೆಗೆ ಒಂದಿಷ್ಟು ಹಣ ಕೊಡಬೇಕು. ತಂಗಿ ಮದುವೆ ಮಾಡಲು ಉಳಿತಾಯ ಮಾಡಬೇಕು. ಒಂದೊಳ್ಳೆ ಮನೆಗೆ ಹೋಗಿ ನೆಲೆಸಬೇಕು' ಎಂದು ಥೇಟ್ ಮಧ್ಯಮವರ್ಗದ ಸಹಜ ಬೇಕುಗಳನ್ನೇ ಅವರು ಹೇಳಿಕೊಂಡಿದ್ದರು.

ಈ ಸಲ ಏಪ್ರಿಲ್ 9ರಂದು ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಗೆಲ್ಲಲು ಕೊನೆಯ ಐದು ಎಸೆತಗಳಲ್ಲಿ 28 ರನ್‌ಗಳು ಕೋಲ್ಕತ್ತ ತಂಡಕ್ಕೆ ಬೇಕಿದ್ದವು. ರಿಂಕು ಸತತವಾಗಿ ಐದು ಸಿಕ್ಸರ್‌ಗಳನ್ನು ಹೊಡೆದು, ಗೆಲುವನ್ನು ಸಾಧ್ಯಮಾಡಿದಾಗ ಅವರ ಬದುಕಿನ ಹಳೆಯ ಪುಟಗಳೆಲ್ಲ ತೆರೆದುಕೊಳ್ಳಲಾರಂಭಿಸಿದವು.

ಅದೇ ಹೊತ್ತಿಗೆ ರೋಹನ್ ಗಾವಸ್ಕರ್ ವೀಕ್ಷಕ ವಿವರಣೆ ನೀಡುತ್ತಾ, ಎಡಗೈ ಬೌಲರ್ ಯಶ್ ದಯಾಳ್ ಅವರನ್ನು ವಿಪರೀತ ಟೀಕಿಸಿದರು. 'ಇಂಥ ಕೆಟ್ಟ ಬೌಲಿಂಗ್ ಮಾಡಿದರೆ ಸಹಜವಾಗಿಯೇ ರಿಂಕು ತರಹದ ಬ್ಯಾಟ್ಸ್‌ಮನ್‌ನನ್ನು ಜನ ಕೊಂಡಾಡತೊಡಗುತ್ತಾರೆ' ಎಂದವರು ವ್ಯಂಗ್ಯ ಬೆರೆತ ಧಾಟಿಯಲ್ಲಿ ಹೇಳಿಬಿಟ್ಟರು. ಇದಕ್ಕೆ ಕ್ರಿಕೆಟ್ ಅಭಿಮಾನಿಗಳು ಕೊಟ್ಟ ಪ್ರತಿಕ್ರಿಯೆ ಖಾರವಾಗಿತ್ತು. ರಿಂಕು ಐಪಿಎಲ್ ಬ್ಯಾಟಿಂಗ್ ಜನಪ್ರಿಯತೆಯ ಬೆಳಕಿನಡಿ ಬಂದದ್ದು ಕಡಿಮೆಯೇ. ಕಳೆದ ಬಾರಿ ಐಪಿಎಲ್‌ನಲ್ಲಿ ಏಳು ಇನಿಂಗ್ಸ್‌ಗಳಲ್ಲಿ ಅವರು 174 ರನ್ ಕಲೆಹಾಕಿದ್ದರು. ಸ್ಟ್ರೈಕ್‌ರೇಟ್ 148 ಎನ್ನುವುದು ಗಮನಾರ್ಹ.

ಉತ್ತರ ಪ್ರದೇಶದ ಅಲಿಗಡದ ರಿಂಕು ಕುಟುಂಬ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ತುಂಬಿಸುವ ಸ್ಥಳಕ್ಕೆ ಹೊಂದಿಕೊಂಡ ಪ್ರದೇಶದ ಕ್ವಾರ್ಟರ್ಸ್‌ನಲ್ಲಿ ವಾಸವಿದ್ದದ್ದು. ಕ್ರಿಕೆಟ್ ಹುಚ್ಚಿನಿಂದ ಸಾಲ ಮಾಡುತ್ತಾ ಹೋಗಬೇಕಾಯಿತು. ಕೃಷಿಕರ ಕುಟುಂಬದ ಪಾಲಿಗೆ ಕ್ರಿಕೆಟ್ ಈ ಕಾಲದಲ್ಲಿ ಶ್ರೀಮಂತರ ಆಟವೇ ಹೌದು. ಅವರ ತಂದೆ ಅದೇ ಎಲ್‌ಪಿಜಿ ಪ್ಲಾಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ರಿಂಕು ತಮಗೆ ಆಡುವ ಅವಕಾಶ ಸಿಕ್ಕಾಗಲೆಲ್ಲ ನೆಮ್ಮದಿಯ ನಿಟ್ಟುಸಿರಿಡುತ್ತಿದ್ದರು. ಯಾರಾದ್ದಾದರೂ ಸಾಲ ತೀರಿಸಬಹುದಲ್ಲ ಎನ್ನುವುದೇ ಅದಕ್ಕೆ ಕಾರಣ. ಇದರಿಂದಾಗಿಯೇ ಐಪಿಎಲ್‌ನಲ್ಲಿ ಅವಕಾಶ ಸಿಕ್ಕಾಗ ಅವರಿಗೆ ಎಷ್ಟೋ ನಿರಾಳ ಎನ್ನಿಸಿತು.

ಲಿಸ್ಟ್ 'ಎ' ಕ್ರಿಕೆಟ್‌ಗೆ ರಿಂಕು ಕಾಲಿಟ್ಟಿದ್ದು 16ನೇ ವಯಸ್ಸಿನಲ್ಲಿ. 16, 19, 23 ವರ್ಷದೊಳಗಿನವರ ತಂಡದಲ್ಲಿ ಆಡುತ್ತಲೇ ಅನುಭವ ಗಟ್ಟಿ ಮಾಡಿಕೊಂಡು ಬಂದರು. 2016ರ ನವೆಂಬರ್‌ನಲ್ಲಿ ಉತ್ತರ ಪ್ರದೇಶದ ಪರವಾಗಿ ರಣಜಿ ಆಡುವ ಅವಕಾಶ ಸಿಕ್ಕಿತು. ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಆದ ಸಂದರ್ಭವದು. ಲಿಸ್ಟ್ 'ಎ' ಆಡಿದಾಗ ಮೊದಲ ಪಂದ್ಯದಲ್ಲೇ 83 ರನ್ ಗಳಿಸಿ ಭರವಸೆ ಮೂಡಿಸಿದ್ದ ಅವರು ರಣಜಿ ಕ್ರಿಕೆಟ್‌ನಲ್ಲಿ ನೋಡನೋಡುತ್ತಲೇ ಪಳಗಿದ ಬ್ಯಾಟ್ಸ್‌ಮನ್ ತರಹ ಆಡಿದ್ದರು. 2018–19ರ ರಣಜಿಯ ಗುಂಪು ಹಂತದ ಪಂದ್ಯಗಳಲ್ಲಿ 803 ರನ್ ಹೆಕ್ಕಿದರು. ಆ ಹಂತದಲ್ಲಿ ಉತ್ತರ ಪ್ರದೇಶದ ಪರವಾಗಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡರು. ಮುಂದಿನ ಹಂತಗಳೂ ಸೇರಿದಂತೆ ಹತ್ತು ಪಂದ್ಯಗಳಿಂದ 953 ರನ್‌ಗಳನ್ನು ಗಳಿಸಿ, ಎಡಗೈ ಬ್ಯಾಟ್ಸ್‌ಮನ್ ಆಗಿ ತಾವು ಎಷ್ಟು ಮೊನಚು ಎನ್ನುವುದನ್ನು ಸಾಬೀತುಪಡಿಸಿದರು. ಅಭಿಷೇಕ್ ನಾಯರ್ ಆಗ ಹೇಳಿಕೊಟ್ಟಿದ್ದ ಬ್ಯಾಟಿಂಗ್ ಪಾಠ ನೆರವಿಗೆ ಬಂದಿತ್ತು. ಔಟಾಗದೆ 163, 149, 149 ಹಾಗೂ 150...ಆ ಟೂರ್ನಿಯಲ್ಲಿ ಗಳಿಸಿದ್ದ ನಾಲ್ಕು ಶತಕಗಳ ಬಿಡಿಬಿಡಿ ಸ್ಕೋರ್ ಇದು. ಸಂಯಮ ಯಾವ ಮಟ್ಟದಲ್ಲಿ ಇದೆ ಎನ್ನುವುದಕ್ಕೆ ಈ ಸ್ಕೋರ್‌ಗಳೇ ಸಾಕ್ಷಿ.

2017ರಲ್ಲಿಯೇ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡವು ಐಪಿಎಲ್ ಟೂರ್ನಿಗೆ ಇವರನ್ನು ಆಯ್ಕೆ ಮಾಡಿಕೊಂಡಿತ್ತಾದರೂ, ಆಗ ಹೆಚ್ಚೇನೂ ಗಮನ ಸೆಳೆಯಲು ಆಗಿರಲಿಲ್ಲ.

2021ರಲ್ಲಿ ಮೊಣಕಾಲು ನೋವಿನಿಂದಾಗಿ ಐಪಿಎಲ್ ತಂಡದಿಂದಲೇ ಹೊರಗುಳಿಯಬೇಕಾಯಿತು. ಅದು ಗುರುಕೀರತ್ ಸಿಂಗ್ ಮಾನ್ ಆಯ್ಕೆಗೆ ಅವಕಾಶ ಕಲ್ಪಿಸಿಕೊಟ್ಟಿತ್ತು. ಆದರೆ, ಅವರು ಸಿಕ್ಕ ಅವಕಾಶವನ್ನು ದೊಡ್ಡ ಮಟ್ಟದಲ್ಲಿ ಹಣ್ಣಾಗಿಸಿಕೊಳ್ಳಲಿಲ್ಲ. ಹೀಗಾಗಿ ರಿಂಕುಗೆ ಮತ್ತೆ ಅವಕಾಶದ ಬಾಗಿಲು ತೆರೆದುಕೊಂಡಿತು.

2019ರಲ್ಲಿ ರಿಂಕು ಬಿಸಿಸಿಐನಿಂದ ಮೂರು ತಿಂಗಳ ನಿಷೇಧಕ್ಕೆ ಒಳಗಾಗಿದ್ದರು. ಅನುಮತಿ ಪಡೆಯದೆ ಅಬುದಾಬಿಯಲ್ಲಿ ನಡೆದ 'ರಮ್ದಾನ್ ಟ್ವೆಂಟಿ 20' ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಹೋಗಿದ್ದಕ್ಕೆ ಈ ಶಿಕ್ಷೆ ಅನುಭವಿಸಬೇಕಾಗಿ ಬಂದಿತ್ತು.

ಈ ಸಲ ಐಪಿಎಲ್‌ನಲ್ಲಿ ಮೂರು ಪಂದ್ಯಗಳಲ್ಲಿ ಒಂಬತ್ತು ಸಿಕ್ಸರ್‌ಗಳನ್ನು ರಿಂಕು ಸಿಡಿಸಿದ್ದಾರೆ. ಫುಲ್‌ಟಾಸ್, ಲೋ ಫುಲ್‌ಟಾಸ್ ಎಸೆತಗಳನ್ನು ಅವರು ಹೇಗೆ ಸಿಕ್ಸರ್‌ಗೆ ಅಟ್ಟಬಲ್ಲರೆನ್ನುವುದಕ್ಕೆ ಸಾಕ್ಷ್ಯಗಳು ಸಿಕ್ಕಿವೆ. ಶಾರ್ಟ್ ಪಿಚ್ ಎಸೆತ ಆಡುವುದೂ ತಮಗೆ ಗೊತ್ತೆನ್ನುವ ಪ್ರಾತ್ಯಕ್ಷಿಕೆಯೂ ಸಿಕ್ಕಿದೆ. ಈ ಸಲ ಅವರ ಸ್ಟ್ರೈಕ್ ರೇಟ್ 169ರ ಮೇಲಿದೆ.

'ಈ ಹುಡುಗ ಹೇಗೆ ಆಡುವನೋ ನೋಡಬೇಕು' ಎಂದು ಶಾರುಖ್ ಖಾನ್ ಮೊನ್ನೆ ಮೊನ್ನೆ ಹೇಳಿದ್ದರು. ಎಲ್ಲರೂ ಈಗ ಅದೇ ಕುತೂಹಲದಿಂದ ಅವರನ್ನು ನೋಡುವಂತಾಗಿದೆ.

ಪ್ರತಿಕ್ರಿಯಿಸಿ: feedback@sudha.co.in